
# ಸೆಲೆಬ್ರಿಟಿ

■ ಹನಿ

## ಸೆಲೀನಾ ಬಿಂದಿ

ಹಾಲಿವುಡ್ ಸುಂದರಿ ಸೆಲೀನಾ ಗೋಮ್ಸ್ 'ಇನ್‌ಸ್ಟಾಗ್ರಾಮ್'ನಲ್ಲಿ ತೇಲಿಬಿಟ್ಟಿರುವ ಚಿತ್ರ ಭಾರತೀಯ ಸಂಗೀತ ಪ್ರೇಮಿಗಳಲ್ಲಿ ಹೊಸ ನಿರೀಕ್ಷೆಗಳನ್ನು ಹುಟ್ಟಿಸಿದೆ. ಸದಾ ಮಿನಿಸ್ಕರ್ಟ್‌ಗಳಲ್ಲಿ ಮಿಂಚುತ್ತಿದ್ದ ಈ ಬಾಲಿವುಡ್ ನಟಿ, ಗಾಯಕಿ ಭಾರತೀಯ ಸೀರೆಯುಟ್ಟು, ಹಣೆಗೆ ಬಿಂದಿಯಿಟ್ಟು ಈ ಫೋಟೋದಲ್ಲಿ ರಾರಾಜಿಸಿದ್ದಾಳೆ. ಇತ್ತೀಚೆಗಷ್ಟೇ ನೇಪಾಳಕ್ಕೆ ಬಂದುಹೋದ ಸೆಲೀನಾಳ ಈ ಹೊಸ ಭಾವಭಂಗಿಗೆ ಪ್ರಿಯತಮ, ಜಸ್ಟಿನ್ ಬೀಬರ್ ಜತೆಗಿನ ವೈಮನಸ್ಯವೇ ಕಾರಣ ಎಂದು ವಿಶ್ಲೇಷಣೆ ನಡೆದಿದೆ.17ರ ಹರೆಯದಲ್ಲೇ ಯೂನಿಸೆಫ್‌ನ ರಾಯಭಾರಿ ಆಗಿ ಸುದ್ದಿ ಮಾಡಿದ ಸೆಲೀನಾ, ಎಳೆವೆಯಲ್ಲೇ ಟೀವಿ ಸೀರಿಯಲ್ ಮತ್ತು ಸಿನಿಮಾಗಳ ಮೂಲಕ ಹಾಲಿವುಡ್‌ನ ಖ್ಯಾತಿಗೇರಿದಾಕೆ. ಈಗಿನ್ನೂ 21ರ ಹರೆಯದಲ್ಲಿ ಭಗ್ನಪ್ರೇಮಿಯಾಗಿ ಫೇಸ್‌ಬುಕ್‌ನಲ್ಲಿ ಗೋಳು ತೋಡಿಕೊಳ್ಳುತ್ತಿರುವುದು ತಮಾಷೆಯಾಗಿ ಕಾಣಿಸುತ್ತಿದೆ. ಆದರೆ ಸೆಲೆಬ್ರಿಟಿಗಳ ಏಕಾಂಗಿತನ ನಿಜಕ್ಕೂ ತುಂಬಾ ಘೋರವಾಗಿರುತ್ತದೆ ಎನ್ನುವುದಂತೂ ನಿಜ.

ಮೋಂಟೆಕಾರ್ಲೋ, ದಿ ಮುಫೆಟ್ಸ್, ಹೋಟೆಲ್ ಟ್ರಾನ್ಸಿಲ್ವೆನಿಯಾ, ಸ್ಪ್ರಿಂಗ್ ಬ್ರೇಕರ್ಸ್ ಮುಂತಾಗಿ ಇತ್ತೀಚಿನ ಸಿನಿಮಾಗಳ ಮೂಲಕ ಸುದ್ದಿ ಆದದ್ದಕ್ಕಿಂತ ಹೆಚ್ಚಾಗಿ ಸೆಲೀನಾ 'ಕಮ್ ಆ್ಯಂಡ್ ಗೆಟಿಟ್' ಮ್ಯೂಸಿಕ್ ಆಲ್ಬಂ ಮೂಲಕ ಮಿಂಚಿದ್ದಾಳೆ. 'ಬಿಲ್‌ಬೋರ್ಡ್'ನ ಟಾಪ್ ಟೆನ್‌ನಲ್ಲಿ ಸ್ಥಾನ ಗಿಟ್ಟಿಸಿರುವ ಈ ಮುದ್ದು ಮುಖದ ಸುಂದರಿ, ಯೂನಿಸೆಫ್ ರಾಯಭಾರಿಯಾಗಿ ಘಾನಾ, ಚಿಲಿ ಮುಂತಾದ ದೇಶಗಳ ಮಕ್ಕಳ ಶಿಕ್ಷಣ, ನೈರ್ಮಲ್ಯಗಳ ನಿಧಿಗೆ ಸಾಕಷ್ಟು ದುಡ್ಡು ಶೇಖರಿಸಿ ಕೊಟ್ಟಿದ್ದಾಳೆ. ಬ್ರಿಟ್ನಿ ಸ್ಪಿಯರ್ಸ್, ಬಿಯೋನ್ಸ್, ರೆಹಾನ್ನಾ ಮುಂತಾದ ಹಾಲಿವುಡ್ ಗಾಯಕಿಯರ ಉತ್ತರಾಧಿಕಾರಿಯಂತೆ ಈಗಲೇ ಕಂಗೊಳಿಸುತ್ತಿದ್ದಾಳೆ.





## ಏಕಾಂಗಿ ಪ್ರೀತಿ

ಈಕೆಯ ಹೆಸರಲ್ಲೇ ಪ್ರೀತಿ ಇದೆ; ಆದರೆ ನಿಜ ಜೀವನದಲ್ಲಿ ಪ್ರೀತಿ ಭಗ್ನ–ಗೊಂಡಿದೆ. ಬಾಲಿವುಡ್‌ನ 'ಬೋಲ್ಡ್ ಆ್ಯಂಡ್ ಬ್ಯೂಟಿಫುಲ್' ಎಂದೇ ಖ್ಯಾತಿ ಹೊಂದಿದ್ದ ಪ್ರೀತಿ ಜಿಂಟಾ, ಈಗ ಸುದ್ದಿಯಲ್ಲಿದ್ದಾಳೆ. ವಾಡಿಯಾ ಉದ್ಯಮ ಗುಂಪಿನ ಯುವರಾಜ ನೆಸ್ ಮತ್ತು ಜಿಂಟಾ ನಡುವಣ ಪ್ರೀತಿ ಸಾಕಷ್ಟು ಹಳೆಯದೇ. ಆದರೆ ಕಾಲನ ಪರೀಕ್ಷೆಯಲ್ಲಿ ಈ ಪ್ರೀತಿ ಮುದುಡಿ ಮಲಗಿದ್ದು ಈಗ ವಾಸ್ತವ. ಐಪಿಎಲ್ ಕ್ರಿಕೆಟ್ ಲೀಗ್‌ನಲ್ಲಿ ಕಿಂಗ್ಸ್ ಇಲೆವೆನ್ ಪಂಜಾಬ್ ತಂಡದ ಜಂಟಿ ಒಡೆತನ ಹೊಂದಿರುವ ಪ್ರೀತಿ ಮತ್ತು ನೆಸ್ ನಡುವಣ ಕಚ್ಚಾಟ ಪೊಲೀಸ್ ಠಾಣೆಯ ಮೆಟ್ಟಿಲು ಹತ್ತಿದೆ. 'ಬಹಿರಂಗವಾಗಿ ನನ್ನನ್ನು ಬೈದು ಅವಮಾನ ಮಾಡಿದ್ದಾನೆ. ಲೈಂಗಿಕ ಕಿರುಕುಳ ನೀಡಿದ್ದಾನೆ' ಎಂದು ಗೆಳೆಯನ ಮೇಲೆ ಜಿಂಟಾ ದೂರು ನೀಡಿದ್ದಾಳೆ. ಪೊಲೀಸರು ಹಾಕಿರುವ ಸೆಕ್ಷನ್‌ಗಳನ್ನು ನೋಡಿದರೆ, ನೆಸ್ ಗಂಭೀರ ಕ್ರಿಮಿನಲ್ ಅಪರಾಧಗಳಲ್ಲಿ ಸಿಕ್ಕು ಬಿದ್ದಂತೆಯೇ. ಆದರೆ ದೂರು ನೀಡಿ ಲಾಸ್ ಏಂಜಲೀಸ್‌ಗೆ ಹಾರಿರುವ ಜಿಂಟಾ, ಭಾರತಕ್ಕೆ ವಾಪಸಾದ ಬಳಿಕ ಯಾವ ನಿಲುವು ತೆಗೆದುಕೊಳ್ಳುತ್ತಾಳೋ ಗೊತ್ತಿಲ್ಲ.

ಪರ್ಕ್ ಚಾಕೊಲೇಟ್‌ನ ಮಾಡೆಲಿಂಗ್‌ನಲ್ಲಿ ಮೊದಲು ಮಿಂಚಿದ ಈ ಗುಳಿಕೆನ್ನೆಯ ತರುಣಿ, (ಬರ್ತ್‌ಡೇ: 31–1–1975) ಶಾರೂಕ್ ಖಾನ್ ಜತೆಗೆ ನಟಿಸಿದ ಮೊದಲ ಚಿತ್ರ 'ದಿಲ್ ಸೆ' ಮೂಲಕ ಬಾಲಿವುಡ್‌ನ ಕಣ್ಮಣಿಯಾದವಳು. ಬಳಿಕ 'ಕಲ್ ಹೋ ನ ಹೋ' , 'ಕೋಯಿ ಮಿಲ್ ಗಯಾ' ಸೂಪರ್‌ಹಿಟ್ ಚಿತ್ರಗಳ ಮೂಲಕ ಮನೆಮಾತಾದಳು. ಶಿಮ್ಲಾ ಸಂಜಾತೆ ಪ್ರೀತಿ 13ರ ಎಳವೆಯಲ್ಲೇ ತಂದೆಯನ್ನು ಅಪಘಾತದಲ್ಲಿ ಕಳೆದುಕೊಂಡು, ಬೋರ್ಡಿಂಗ್ ಸ್ಕೂಲ್‌ನ ಶಿಸ್ತಿನಲ್ಲಿ ಬೆಳೆದವಳು. ಅನ್ನಿಸಿದ್ದನ್ನು ಮುಚ್ಚುಮರೆ ಇಲ್ಲದೆ ಹೇಳುತ್ತಿದ್ದ ಈಕೆಯ ಬಿಂದಾಸ್ ನಡವಳಿಕೆ ಹಲವು ಸಲ ವಿವಾದ ಸೃಷ್ಟಿಸಿದ್ದೂ ನಿಜ. ನಿರ್ಮಾಪಕ ಭರತ್ ಷಾ ಪ್ರಕರಣದಲ್ಲಿ ಬಾಲಿವುಡ್‌ನ ಘಟಾನುಘಟಿಗಳೆಲ್ಲ ಬಾಯಿ ಮುಚ್ಚಿ ಕುಳಿತರೂ, ಭೂಗತ ಮಾಫಿಯಾ ವಿರುದ್ಧ ಗಟ್ಟಿಯಾಗಿ ಮಾತನಾಡಿದವಳು ಜಿಂಟಾ. 'ನೆಸ್ ನನ್ನ ವಿರುದ್ಧ ಬಹಿರಂಗವಾಗಿ ಬೈಗುಳ ಪ್ರಯೋಗಿಸಿ ಅವಮಾನ ಮಾಡಿದರೂ ಯಾರೂ ನೆರವಿಗೆ ಬರಲಿಲ್ಲ. ಈಗ ಪೊಲೀಸರ ಮೊರೆ ಹೋಗುವುದು ಅನಿವಾರ್ಯವಾಗಿದೆ' ಎಂದು ಆಕೆ ನೋವು ತೋಡಿಕೊಂಡಿದ್ದಾಳೆ.

ಜಿಂಟಾ ಕ್ರಿಮಿನಲ್ ಸೈಕಾಲಜಿಯಲ್ಲಿ ಸ್ನಾತಕೋತ್ತರ ಪದವಿ ಮಾಡಿದಾಕೆ. ಈಗ ಜೀವದ ಗೆಳೆಯನ ವಿರುದ್ಧವೇ ಕ್ರಿಮಿನಲ್ ಕೇಸ್ ಹೂಡಿದ್ದಾಳೆ. ನೆಸ್ ಜತೆ ಸೇರಿ ರೂಪಿಸಿದ್ದ 'ಪಿ2ಎನ್2 ಮೀಡಿಯಾ'ದ ಷೇರುಗಳನ್ನು ಮಾರಿ ಲಾಸ್ ಏಂಜಲೀಸ್‌ನಲ್ಲೇ ಆಕೆ ನೆಲೆಸಲಿದ್ದಾಳೆ ಎಂಬ ಸುದ್ದಿ ಹಬ್ಬಿದೆ. ಆಕೆ ನಟಿಸುತ್ತಿದ್ದ ಬೈಯ್ಯಾಜಿ ಸೂಪರ್‌ಹಿಟ್ ಎನ್ನುವ ಚಿತ್ರ ಅರ್ಧ ಮುಗಿದಿದೆ. 'ಹರ್ ಪಲ್' ಎಂಬ ಚಿತ್ರದ ಯೋಜನೆ ಅರ್ಧಕ್ಕೆ ನಿಂತಿದೆ. ಸದ್ಯಕ್ಕಂತೂ ಪ್ರೀತಿ ಏಕಾಂಗಿ ಎನ್ನಲಡ್ಡಿಯಿಲ್ಲ.

Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65